ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ನೀವು ಕೇಳಿರುವುದು ೧೭ ಜನರಿಗೆ ಖಾಯಂ ಮಾಡಿ ಎಂದು. ೧೭ ಜನ ಸರ್ಕಾರಕ್ಕೆ ಬಾಕಿ ಬೇರೆ ಕೊಡಬೇಕಾಗಿದೆ. ಮಾನ್ಯ ಸದಸ್ಯರು ಬಾಕಿ ಕೊಡಿಸಿದರೆ ಅವರನ್ನು ಖಾಯಂ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಅಲ್ಲಿ ಜಮೀನನ್ನು ಅಭಿವೃದ್ಧಿ ಮಾಡಿ ಸರಿಯಾಗಿ ಜೀವನ ಮಾಡುವುದಕ್ಕೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ಆದಷ್ಟು ಜಾಗ್ರತೆ ಕಾರ್ಯಕ್ರಮ ತೆಗೆದುಕೊಂಡು ಎಷ್ಟು ದಿವಸದಲ್ಲಿ ಅವರನ್ನು ಖಾಯಂ ಮಾಡುವ ಬಗ್ಗೆ ತೀರ್ಮಾನ ಮಾಡುತ್ತದೆಂಬುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—೧೭ ಜನರಿಗೆ ತಲಾ ೫ ಎಕರೆ ಖುಷ್ಕಿ ಮತ್ತು ೯ ಎಕರೆ ತರಿ ಜಮೀನನ್ನು ಕೊಟ್ಟಿದೆ. ಯಾವ ಕಾಲೋನಿಗೂ ಇಷ್ಟು ಜಮೀನನ್ನು ಕೊಟ್ಟಿಲ್ಲ. ಆದರೂ ಆ ಜನರು ಸರಿಯಾಗಿ ವ್ಯವಸಾಯವನ್ನು ಮಾಡುತ್ತಿಲ್ಲ. ಯಾರೋ ಒಬ್ಬರನ್ನು ಬೇನಾಮಿಯಲ್ಲಿಟ್ಟು ಕೆಲಸ ಮಾಡಿಸುವುದು, ಯಾರಿಗೋ ಗುತ್ತಿಗೆಗೆ ಕೊಡುವುದು, ಹೀಗೆಲ್ಲಾ ಮಾಡುತ್ತಿದ್ದಾರೆ.

ಅಧ್ಯಕ್ಷರು.—೧೭ ಜನರ ಪಟ್ಟಿ ಕೊಟ್ಟಿದ್ದಾರೆ. ಅವರ ಹೆಸರುಗಳನ್ನು ಓದಿದ್ದೀರಾ ಮಾಯಣ್ಣನವರೇ ?

ಶ್ರೀ ಡಿ. ಟಿ. ಮಾಯಣ್ಣ.—ಓದಿದ್ದೇನೆ.

ಅಧ್ಯಕ್ಷರು.—ಇನ್ನೊಂದು ಸಾರಿ ಓದಿ.

ಶ್ರೀ ಡಿ. ಟಿ. ಮಾಯಣ್ಣ.—೩೬೫ ದಿವಸಗಳೂ ಅಲ್ಲೇ ಇರಬೇಕೆಂದು ಹೇಳಿದರೆ ಯಾರಾದರೂ ಇರುವುದಕ್ಕಾಗುತ್ತದೆಯೇ ? ಕೆಲಸ ಇದ್ದಾಗ ಹೋಗಿ ಬರುತ್ತಾರೆ. ಅದನ್ನೇ ಒಂದು ಕಂಡೀಷನ್ ಎಂದು ಹೇಳಿದರೆ.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ನಿಮ್ಮ ಮುಖಂಡತ್ವದಲ್ಲಿ ಅದನ್ನೆಲ್ಲಾ ಸರಿ ಮಾಡಿ. ನೀವು ಅದೇ ಕೆಲಸಕ್ಕೆ ನಿಂತಿದ್ದೀರಿ. ನಿಮಗೆ ಬೇರೆ ಯಾವ ಕೆಲಸವೂ ಇಲ್ಲ. ನೀವು ಬ್ರಹ್ಮಚಾರಿಗಳು. ನೀವು ನಿಂತು ಎಲ್ಲಾ ಸರಿ ಮಾಡಿದರೆ ಗ್ಯಾರಂಟಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

Construction of Cold Storage at Dharwad City

673 SRI BHAVU RAO DESHPANDE (Dharwad).—Will the Minister of State for Horticulture and Prisons be pleased to state.—

(a) whether Government has accorded sanction for construction of a Cold Storage at Dharwad City for benefit of farmers ;

(b) if so, when ;

(c) whether it is a fact that the Agricultural Produce Marketing Committee, Dharwad has given one acre of land for this Cold Storage ;

(d) if so, when ;

(e) when the construction work of cold storage would be ommenced and when it would be completed ?

SRI K. YENKATAPPA (Minister of State for Horticulture and Prisons).—

(a) No.

(b) Question does not arise.

(c) It is a fact.

(d) On 29th January. 1981.

(e) Central Food Research Institute has agreed to give technical advice which is required to establish cold storage. A motion has been received by the Government to entrust the work to them and the same is under consideration. After issue of order, necessary further action will be taken to construct the cold storage.

ಶ್ರೀ ಬಾಪುರಾವ್ ದೇಶಪಾಂಡೆ.— ನಾನು ಕೇಳಿದ ಮೊದಲನೇ ಪ್ರಶ್ನೆ ಧಾರವಾಡ ನಗರದಲ್ಲಿ ರೈತರ ಅನುಕೂಲಕ್ಕಾಗಿ ಒಂದು ಶೈತ್ಯಾಗಾರವನ್ನು ಕಟ್ಟಲು ಸರ್ಕಾರ ಮಂಜೂರಾತಿ ನೀಡಿದೆಯೇ ಎಂಬುದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ನೋಡಿದರೆ ತಮಗೆ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಅನ್ನಿಸುತ್ತದೆ. ೧೯೭೯ರಲ್ಲೇ ನನ್ನ ಪ್ರಶ್ನೆಗೆ ಉತ್ತರವಾಗಿ ಶೈತ್ಯಾಗಾರಕ್ಕೆ ಮಂಜೂರಾತಿ ಕೊಟ್ಟಿದೆ ಎಂದು ಹೇಳಿದ್ದಾರೆ. ಎ.ಪಿ.ಎಂ.ಸಿ.ಯವರು ಆಮೇಲೆ ಜಾಗ ಕೊಟ್ಟರು. ಇದನ್ನು ಗಮನಿಸಿದಾಗ ಇಲ್ಲಿ ಸರ್ಕಾರದವರು ಕೊಟ್ಟಿರುವ ಉತ್ತರ ತಪ್ಪು. ಇದಕ್ಕೇನಾದರೂ ಹಣ ಕಾಸಿನ ತೊಂದರೆ ಇದೆಯೇ? ಕಟ್ಟಡ ಕಟ್ಟುವುದಕ್ಕೆ ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಕೆ. ಯೆಂಕಟಪ್ಪ.— ಉತ್ತರ ಕೊಟ್ಟಿರುವುದು ಸರಿಯಾಗಿದೆ. ಸಾಲ ತೆಗೆದುಕೊಂಡ ತಕ್ಷಣ ಮಂಜೂರಾಗಿದೆ ಎಂದು ಅರ್ಥವಲ್ಲ. ಹಣ ತೆಗೆದುಕೊಂಡಿರುವುದು ನಿಜ. ಟಿ.ಎ.ಪಿ.ಸಿ.ಎಂ.ಎಸ್.ಗೆ ಹಣ ಕೊಟ್ಟಿದೆ ಎಂಬುದು ಸರಿ. ಹಾಗೆಂದ ಮಾತ್ರಕ್ಕೆ ಮಂಜೂರು ಆಗಿದೆ ಎಂದು ಅರ್ಥವಲ್ಲ. ಸಾಲ ತೆಗೆದುಕೊಂಡಿರುವುದು ನಿಜ. ಅಂದಾಜು ತಯಾರಾಗುತ್ತಿದೆ. ತಾಂತ್ರಿಕವಾಗಿ ಸಲಹೆ ಬೇಕಾಗಿದೆ, ಅದಕ್ಕೆ ಸಿ ಎಫ್.ಟಿ.ಆರ್.ಐ ಗೆ ಸರ್ಕಾರ ಈಗಾಗಲೇ ಆಜ್ಞೆ ಮಾಡಿ ತಿಳಿಸಿದೆ. ಅದಕ್ಕೆ ಎಷ್ಟು ಖರ್ಚು ವೆಚ್ಚ ತಗಲುತ್ತದೋ ಅದನ್ನು ಭರಿಸುವುದಕ್ಕೆ ಸರ್ಕಾರದವರು ಒಪ್ಪಿಕೊಂಡು ತಿಳಿಸಿದ್ದೇವೆ. ಸಿ.ಎಫ್.ಟಿ.ಆರ್.ಐ.ನವರು ಎರಡು ತಿಂಗಳೊಳಗೆ ತಾಂತ್ರಿಕ ಸಲಹೆ ಮತ್ತು ಅಂದಾಜನ್ನು ಕೊಡ ಬಹುದು. ಕೊಟ್ಟತಕ್ಷಣ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಬಾಪೂರಾವ್ ದೇಶಪಾಂಡೆ.— ಹಿಂದೆ ೩ ಲಕ್ಷ ರೂಪಾಯಿ ಮಂಜೂರಾಗಿದ್ದು ಇಲಾಖೆಗಳ ಜಗಳದಲ್ಲಿ ಅದು ಲ್ಯಾಪ್ಸ್ ಆಗಿದೆ. ಹಿಂದಿನ ನಡವಳಿಕೆಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಅದನ್ನು ನೋಡಿ ಇನ್ನು ಮೂರು ನಾಲ್ಕು ತಿಂಗಳೊಳಗಾದರೂ ಕೆಲಸ ಪ್ರಾರಂಭ ಮಾಡಿಸುತ್ತೀರಾ?

ಶ್ರೀ ಕೆ. ಯೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಂಜೂರಾಗಿತ್ತು ಎಂದು ಹೇಳುವುದು ಸರಿಯಲ್ಲ ಎಂದು ಹೇಳುತ್ತಿದ್ದೇನೆ. ತಾಂತ್ರಿಕ ಸಲಹೆ ಇಲ್ಲಿ ಪ್ರಮುಖವಾದ ಅಂಶ. ಹಣ ಇತ್ತು, ಲ್ಯಾಪ್ಸ್ ಆಗಿದೆ ಎಂದು ಹೇಳುವುದು ಸರಿಯಲ್ಲ. ಇರತಕ್ಕ ಹಣದಲ್ಲಿ ಜಾಗಕ್ಕೆ ಕೊಡಬೇಕಾದ ಹಣವನ್ನು ಕೊಟ್ಟಿದ್ದಾರೆ. ೩೦,೮೦೦ ರೂ. ಕೊಡಬೇಕಾಗಿದ್ದು ೩೫,೦೦೦ ರೂಪಾಯಿಗಳನ್ನು ಡಿಪಾಸಿಟ್ ಮಾಡಿದ್ದಾರೆ. ೪,೨೦೦ ರೂಪಾಯಿಗಳು ಟಿ.ಎ.ಪಿ.ಸಿ.ಎಂ.ಎಸ್. ನಿಂದ ಸರ್ಕಾರಕ್ಕೆ ವಾಪಸ್ ಬರ ಬೇಕಾಗಿದೆ. ಇದರ ಜೊತೆಗೆ ಸಿಎಫ್‌ಟಿಆರ್‌ಐ.ನವರನ್ನು ತಾಂತ್ರಿಕ ಸಲಹೆ ಮತ್ತು ಡಿಸೈನ್ ಬಗ್ಗೆ ಸಲಹೆ ನೀಡಬೇಕೆಂದು ಕೇಳಿದ್ದೇವೆ. ಅವರಿಗೆ ನೀಡಿರುವ ಆದೇಶದ ಪ್ರತಿಯನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಬಾಪೂರಾವ್ ದೇಶಪಾಂಡೆ.— ಈ ಬಗ್ಗೆ ತಪ್ಪುಗಳು ಬಹಳ ಬರುತ್ತವೆ. ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿದೆ. ಇಲ್ಲಿ ೧ ಎಕರೆಯನ್ನು ಪುಕ್ಕಟೆಯಾಗಿ ಕೊಡಲಾಗಿದೆ. ಈ ಕಾರ್ಯ ೧ ವರ್ಷ ತಡವಾಗಿದೆ. ಆದ್ದರಿಂದ ಇದು ಇನ್ನೂ ತಡ ಆಗದೇ ಬೇಗ ಆಗಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಯೆಂಕಟಪ್ಪ.— ತಾಂತ್ರಿಕದ ಅವಶ್ಯಕತೆ ಇರುವುದರಿಂದ ಸ್ವಲ್ಪ ತಡವಾಗಬಹುದು. ತಾಂತ್ರಿಕ ಅವಶ್ಯಕತೆಗೆ ಸರ್ಕಾರ ಗಮನಹರಿಸುತ್ತದೆ.